ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 06 ಇಎಸ್‌ಟಿ(8) 2022

**ಆಯುಕ್ತರ ಕಛೇರಿ,**
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001,
ದಿನಾಂಕ:10-01-2023.

**ಜ್ಞಾಪನ**

**ವಿಷಯ:** 2022-23ನೇ ಸಾಲಿನ ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕ ವರ್ಗದವರನ್ನು ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಇಡಿ 141 ಡಿಟಿಇ 2022 ದಿ: 29-11-2022.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 137 ಡಿಟಿಇ 2020 ದಿ:29-01-2021 ಮತ್ತು 29-06-2021.
3. ಆಯುಕ್ತಾಲಯ, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಅಧಿಸೂಚನೆ ಸಂಖ್ಯೆ: ಡಿಟಿಇ 06 ಇಎಸ್‌ಟಿ (8) 2022 ದಿ:31-12-2022.
4. ಆಯುಕ್ತಾಲಯ, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಆದೇಶ ಸಂಖ್ಯೆ: ಡಿಟಿಇ 27 ಇಎಸ್‌ಟಿ (8) 2022 ದಿ:31-12-2022.

***

2022-23 ನೇ ಸಾಲಿಗೆ ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ವರ್ಗದವರನ್ನು ಕೌನ್ಸಿಲಿಂಗ್ ಮುಖಾಂತರ ಉಲ್ಲೇಖ (3) ರನ್ವಯ ವರ್ಗಾವಣೆ ಮಾಡಿ ಆದೇಶಿಸಲಾಗಿರುತ್ತದೆ. ವರ್ಗಾವಣೆಗೊಂಡ ಬೋಧಕ ವರ್ಗದವರ ಪೈಕಿ ನೂತನ ಸಂಸ್ಥೆಗಳ ವಿಶೇಷಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಬೋಧಕ ವರ್ಗದವರು, ವರ್ಗಾವಣೆ ಹೊಂದಿದ ಸಂಸ್ಥೆಗೆ ಕಾರ್ಯವರದಿ ಮಾಡಿಕೊಂಡು, ನಂತರ ಈ ಪೂರ್ವದಲ್ಲಿ ವಿಶೇಷಾಧಿಕಾರಿಯಾಗಿ ಕರ್ತವ್ಯನಿರ್ವಹಿಸುತ್ತಿರುವ ಸಂಸ್ಥೆಯಲ್ಲಿ ಅನ್ಯ ಕಾರ್ಯ ನಿಮಿತ್ತ ವಿಶೇಷಾಧಿಕಾರಿಯಾಗಿ ಕಾರ್ಯನಿರ್ವಹಿಸಲು ಮುಂದಿನ ಆದೇಶದವರೆಗೆ ಆದೇಶಿಸಿದೆ.

ಉಲ್ಲೇಖ (3) ರನ್ವಯ ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ, ಕೌನ್ಸಿಲಿಂಗ್ ಮುಖಾಂತರ ಪ್ರಸ್ತುತ ಡಿ.ಡಿ.ಓ ಲಭ್ಯವಿಲ್ಲದ ಸಂಸ್ಥೆಗಳಿಗೆ ವರ್ಗಾವಣೆ ಹೊಂದಿದ ಹಾಗೂ ಉಲ್ಲೇಖ (4) ರನ್ವಯ ಪ್ರಸ್ತುತ ಡಿ.ಡಿ.ಓ ಲಭ್ಯವಿಲ್ಲದ ಸಂಸ್ಥೆಗಳಿಗೆ ಹುದ್ದೆಸಹಿತ ಸ್ಥಳಾಂತರ ಹೊಂದಿದ ಬೋಧಕ ವರ್ಗದವರಿಗೆ ತಾತ್ಕಾಲಿಕವಾಗಿ ಮುಂದಿನ ಆದೇಶದವರೆಗೆ ನಿಯಮಾನುಸಾರ ವೇತನ ಮತ್ತು ಭತ್ಯೆಗಳನ್ನು (ಕಾರ್ಯವರದಿ ಮಾಡಿಕೊಂಡ ಸಂಸ್ಥೆಗೆ ಅನ್ವಯಿಸುವ ಹೆಚ್ ಆರ್ ಎ ಮತ್ತು ಸಿಸಿಎ ಭತ್ಯೆ) ಕಾರ್ಯವಿಮುಕ್ತಿ ಹೊಂದಿದ ಸಂಸ್ಥೆಯಲ್ಲಿಯೇ ಸೆಳೆಯತಕ್ಕದ್ದು.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**
1. ಸಂಬಂಧಪಟ್ಟ ವರ್ಗಾವಣೆ/ ಹುದ್ದೆಸಹಿತ ಸ್ಥಳಾಂತರಹೊಂದಿದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ಗಳ ಬೋಧಕವರ್ಗದವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

**ಪ್ರತಿ:**

1. ಆಯುಕ್ತರ ಅಪ್ತಶಾಖೆಗೆ ಮಾಹಿತಿಗಾಗಿ.
2. ನಿರ್ದೇಶಕರ ಅಪ್ತಶಾಖೆಗೆ ಮಾಹಿತಿಗಾಗಿ
3. ಆಯುಕ್ತಾಲಯದ ಇ-ಆಡಳಿತ ವಿಭಾಗಕ್ಕೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾ